8ನೇ ವರ್ಷದಲ್ಲಿ...

Office Of Posting: hsn Sorting, No.HSN/784/2020-22

# ಹಾಸನ ಜಿಲ್ಲಾ ದರ್ಪಣ

ಸಂಪಾದಕರು:ಗೋಪಾಲ್
ಮೊ.9886368975

ವ್ಯವಸ್ಥಾಪಕ ಸಂಪಾದಕರು
ಸುಮನ್ ಪಟೇಲ್

ಕನ್ನಡ ದಿನ ಪತ್ರಿಕೆ

Email: hsnjilladarpana@gmail.com

ದರ್ಪಣ ಸೌಹರ್ದ ಸಹಾಕಾರ ಸಂಘ (ರಿ)
ಚಿನ್ನಾಭರಣದ ಮೇಲೆ ಸಾಲ ದೊರೆಯುತ್ತದೆ
ಕನಿಷ್ಠ ಬಡ್ಡಿದರದಲ್ಲಿ ಗರಿಷ್ಠ ಸಾಲವನ್ನು ಅತಿ ಶೀಘ್ರದಲ್ಲಿ ನೀಡಲಾಗುವುದು
ಫೋ: 08172 295975
ದರ್ಪಣ ಆರ್ಕೇಡ್, ಕೆ.ಹೆಚ್.ಬಿ ಕಾಲೋನಿ, ಹೊಸ ಬಸ್ ನಿಲ್ದಾಣದ ಎದುರು, ಹಾಸನ- 573201

HASSANA JILLA DARPANA KARKAN /2015/ 71589 DATE- 19-02-2025 ಬುಧವಾರ Volume- 8 ISSUE- 92 - No.HSN/784/2020-22 PAGE-2, Rs.-1

## ದ್ವಿತೀಯ ಪಿಯುಸಿ ಪರೀಕ್ಷೆ ಯಶಸ್ವಿಗೆ ಅಗತ್ಯ ಕ್ರಮವಹಿಸಲು ಸೂಚನೆ

ಹಾಸನ: ದ್ವಿತೀಯ ಪಿಯುಸಿ ಪರೀಕ್ಷೆಗಳು ಮಾ.1 ರಿಂದ 20 ರವರಿಗೆ ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ನಡೆಯಲಿದ್ದು, ಯಾವುದೇ ಲೋಪದೋಷಗಳಾಗದಂತೆ ನಿಗಾವಹಿಸಿ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಲು ಜಿಲ್ಲಾಧಿಕಾರಿ ಸತ್ಯಭಾಮ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಇಂದು ನಡೆದ ದ್ವಿತೀಯ ಪಿಯುಸಿ ಪರೀಕ್ಷೆ ಕುರಿತು ನಡೆದ ಸಭೆಯಲ್ಲಿ ಮಾತನಾಡಿದ ಅವರು ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಸಿ.ಸಿ.ಕ್ಯಾಮರ ಕಣ್ಗಾವಲು ವ್ಯವಸ್ಥೆಗೆ ಕ್ರಮವಹಿಸುವಂತೆ ತಿಳಿಸಿದರು.

ಹಾಸನ ಜಿಲ್ಲೆಯಲ್ಲಿ 15440 ಹೊಸ ವಿದ್ಯಾರ್ಥಿಗಳು, 400 ಖಾಸಗಿ ವಿದ್ಯಾರ್ಥಿಗಳು, 583 ಪುನರಾವರ್ತಿತ ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 16423 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಣಿ ಮಾಡಿದ್ದಾರೆ. ವಿದ್ಯಾರ್ಥಿಗಳು ಯಾವುದೇ ಗೊಂದಲಕ್ಕೊಳಗಾಗದೆ ಉತ್ತಮವಾಗಿ ಪರೀಕ್ಷೆ ಬರೆಯುವಂತೆ ಶುಭ ಹಾರೈಸಿದ್ದಾರೆ.

ಹಾಸನ ನಗರದಲ್ಲಿ 12, ಆಲೂರು 1, ಅರಸೀಕೆರೆ 6, ಅರಕಲಗೂಡು 3, ಬೇಲೂರು 2, ಚನ್ನರಾಯಪಟ್ಟಣ 4, ಜಾವಗಲ್1, ಹೊಳೆನರಸೀಪುರ 3 ಹಾಗೂ ಸಕಲೇಶಪುರದಲ್ಲಿ 1 ಕೇಂದ್ರ ಸೇರಿದಂತೆ ಜಿಲ್ಲೆಯಲ್ಲಿ ಒಟ್ಟು 33 ಪರೀಕ್ಷಾ ಕೇಂದ್ರಗಳಲ್ಲಿ 7199 ಬಾಲಕರು ಹಾಗೂ 9224 ಬಾಲಕಿಯರು ಪರೀಕ್ಷೆ ಬರೆಯಲಿದ್ದಾರೆ ಎಂದು ತಿಳಿಸಿದರು.

ಪರೀಕ್ಷಾ ಕೇಂದ್ರದ ಸುತ್ತ ಮುತ್ತ 200 ಮೀಟರ್ ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು ಘೋಷಿಸಲಾಗಿದ್ದು, ಪರೀಕ್ಷಾ ಕೇಂದ್ರದ ಸಮೀಪದಲ್ಲಿರುವ ಝೆರಾಕ್ಸ್ ಅಂಗಡಿ ಮತ್ತು ಸೈಬರ್ ಕೇಂದ್ರಗಳನ್ನು ಮುಚ್ಚುವಂತೆ ಆದೇಶಿಸಲಾಗಿದೆ ಎಂದು ತಿಳಿಸಿದರು.

ಪರೀಕ್ಷಾ ಕಾರ್ಯನಿರ್ವಹಿಸುವ ಸಿಬ್ಬಂದಿಗಳನ್ನು ಹೊರತುಪಡಿಸಿ ಮಾಧ್ಯಮದವರು ಮತ್ತು ಪರೀಕ್ಷೆಗೆ ಸಂಬಂಧಪಡದವರು ಪರೀಕ್ಷಾ ಕೇಂದ್ರ ಪ್ರವೇಶಕ್ಕೆ ಅವಕಾಶವಿರುವುದಿಲ್ಲ ಎಂದು ತಿಳಿಸಿದರು.

ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿಗಳು ಮೊಬೈಲ್, ರಿಸ್ಟ್ ವಾಚ್, ಬ್ಲೂ ಟೂತ್ ಯಾವುದೇ ವಿದ್ಯುನ್ಮಾನ ಉಪಕರಣಗಳನ್ನು ಬಳಸದಂತೆ ನಿಷೇಧಿಸಲಾಗಿದೆ. ದ್ವಿತೀಯ ಪಿಯುಸಿ ಪರೀಕ್ಷೆಗಳಿಗೆ ಪ್ರಥಮ ಬಾರಿಗೆ ವೆಬ್ ಕಾಸ್ಟಿಂಗ್ ಮೂಲಕ ಪ್ರತಿ ಪರೀಕ್ಷಾ ಕೇಂದ್ರಗಳ ಚಲನವಲನ ವೀಕ್ಷಿಸಲು ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು. ಪರೀಕ್ಷಾ ಕೇಂದ್ರಕ್ಕೆ ವಿದ್ಯುತ್ ಸಂಪರ್ಕ ನಿರಂತರವಾಗಿ ಇರುವಂತೆ ನೋಡಿಕೊಳ್ಳಲು ಚೆಸ್ಕಾಂ ಅಧಿಕಾರಿಗಳಿಗೆ ತಿಳಿಸಿದರು.




ಮಕ್ಕಳಿಗೆ ಅಗತ್ಯವಿದ್ದಲ್ಲಿ ಪ್ರಥಮ ಚಿಕಿತ್ಸೆ ಒದಗಿಸಲು, ಪರೀಕ್ಷಾ ಕೇಂದ್ರಕ್ಕೆ ಆಶಾ ಕಾರ್ಯಕರ್ತೆಯರನ್ನು ನೇಮಿಸಿ ಎಂದು ತಿಳಿಸಿದರು. ಅಂದ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ಕ್ರಮವಹಿಸಿ ಅವಕಾಶ ಕಲ್ಪಿಸಿ ಎಂದು ತಿಳಿಸಿದರು. ಗ್ರಾಮೀಣ ಪ್ರದೇಶಗಳಿಂದ ಪರೀಕ್ಷೆಗೆ ಬರುವ ಮಕ್ಕಳಿಗೆ ಯಾವುದೇ ತೊಂದರೆಯಾಗ ದಂತೆ ಮಾರ್ಗದಲ್ಲಿ ಸಂಚರಿಸುವ ಕೆ.ಎಸ್.ಆರ್.ಟಿ. ಬಸ್ ಗಳಲ್ಲಿ ಮಕ್ಕಳನ್ನು ಕರೆತರಲು ಕ್ರಮವಹಿಸುವಂತೆ ಸೂಚಿಸಿದರು. ಪರೀಕ್ಷಾ ಕೊಠಡಿಯಲ್ಲಿ ಮಕ್ಕಳಿಗೆ ಕುಡಿಯುವ ನೀರು, ಫ್ಯಾನ್ ವ್ಯವಸ್ಥೆ ಮಾಡುವಂತೆ ನಿರ್ದೇಶನ ನೀಡಿದರಲ್ಲದೆ, ಸಿ.ಸಿ. ಟಿವಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಪರಿಶೀಲಿಸಿ ಖಾತರಿಪಡಿಸಿಕೊಳ್ಳಲು ಸೂಚಿಸಿದರು.

ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ವೆಂಕಟೇಶ್ ನಾಯ್ಡು, ಜಿಲ್ಲಾ ಖಜಾನೆ ಉಪ ನಿರ್ದೇಶಕರಾದ ಕವಿತ, ಉಪ ವಿಭಾಗಾಧಿಕಾರಿ ಶೃತಿ, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕರಾದ ಗಂಗಾಧರ ಕೆ.ಪಿ. ಹಾಗೂ ವಿವಿಧ ಕಾಲೇಜಿನ ಪ್ರಾಂಶುಪಾಲರು ಸಭೆಯಲ್ಲಿ ಹಾಜರಿದ್ದರು.

## ಫೆ.20ಕ್ಕೆ ವಿದ್ಯುತ್ ವ್ಯತ್ಯಯ

ಹಾಸನ: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ವತಿಯಿಂದ ಫೆ.20 ರಂದು 66/11ಕೆ.ವಿ ಚಿಕ್ಕಕೊಂಡಗೊಳ, ಯಸಳೂರು ಮತ್ತು ಹೆತ್ತೂರು ವಿ.ವಿ ಕೇಂದ್ರಗಳಲ್ಲಿ ತ್ರೈಮಾಸಿಕ ನಿರ್ವಹಣಾ ಕೆಲಸವನ್ನು ಹಮ್ಮಿಕೊಂಡಿರುವುದರಿಂದ, ಫೆ.20 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆ ಯವರೆಗೆ ಚಿಕ್ಕಕೊಂಡಗೊಳ ವಿ.ವಿ ಕೇಂದ್ರದಿಂದ ವಿದ್ಯುತ್ ಸರಬರಾಜಾಗುವ ವಿದ್ಯಾನಗರ, ಚಿಕ್ಕಹೊನ್ನೇನಹಳ್ಳಿ, ಎಂ.ಸಿ.ಎಫ್ ಕ್ವಾಟ್ರಸ್, ಹರಳಹಳ್ಳಿ, ಗುಂಡೇಗೌಡನಕೊಪ್ಪಲು, ಎಂ.ಜಿ ರಸ್ತೆ, ಮಾವಿನಹಳ್ಳಿ, ರಿಂಗ್ ರಸ್ತೆ, ಜಯನಗರ, ಆಕಾಶವಾಣಿ, ಸರ್ಕಾರಿ ವಿಜ್ಞಾನ ಕಾಲೇಜು, ಆರ್.ಸಿ ರಸ್ತೆ, ರಂಗೋಲಿಹಳ್ಳ, ಉತ್ತರ ಬಡಾವಣೆ, ಸದಾಶಿವನಗರ, ಪೆನ್ಷನ್ ಮೊಹಲ್ಲ, 80ಫೀಟ್ ರಸ್ತೆ, ರಾಜ್‌ಕುಮಾರ್ ನಗರ, ಹೇಮಾವತಿ ನಗರ ಮತ್ತು ಕಬ್ಬಳ್ಳಿ ಹಾಗೂ ಯಸಳೂರು ವಿ.ವಿ ಕೇಂದ್ರದಿಂದ ವಿದ್ಯುತ್ ಸರಬರಾಜಾಗುವ ಯಸಳೂರು, ಕುಂಬ್ರಳ್ಳಿ, ಕೆರೋಡಿ, ಉಚ್ಚಂಗಿ ಮತ್ತು ಚಂಗಡಿಹಳ್ಳಿ ಮತ್ತು ಹೆತ್ತೂರು ವಿ.ವಿ ಕೇಂದ್ರದಿಂದ ವಿದ್ಯುತ್ ಸರಬರಾಜಾಗುವ ಹೆತ್ತೂರು, ಹೊಂಗಡಹಳ್ಳ, ವನಗೂರು, ಬಿಸಿಲೆ ಘಾಟ್, ಮತ್ತು ವಳಲಹಳ್ಳಿ ಸುತ್ತಮುತ್ತಲ ಪ್ರದೇಶಗಳ ಸ್ಥಾವರಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಹಾಸನ ಕಾರ್ಯಾಚರಣೆ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ತಿಳಿಸಿದ್ದಾರೆ.

## ಪುಸ್ತಕ ಪ್ರೀತಿಯ ಬಳಗ ಕಟ್ಟುವ ಕನಸಿಗೆ ಸಹಕಾರ ನೀಡಲು ಗಂಗಾಧರ್ ಮನವಿ




ಹಾಸನ: ಮಾಗಧ ಕಾದಂಬರಿ ರಚನೆಗಾಗಿ ಐಟಿ ಉದ್ಯೋಗ ತೊರೆದು ಸುಮಾರು ನಾಲ್ಕೂವರೆ ವರ್ಷಗಳ ಕಾಲ ಕ್ಷೇತ್ರ ಅಧ್ಯಯನ, ಶಾಸನಗಳ ಅಧ್ಯಯನ, ಮೂಲ ಕೃತಿಗಳ ಕುರಿತು ಅಧ್ಯಯನ ನಡೆಸಲಾಗಿದೆ ಎಂದು ಲೇಖಕಿ ಸಹನಾ ವಿಜಯ ಕುಮಾರ್ ಹೇಳಿದರು.

ನಗರದ ರಿಂಗ್ ರಸ್ತೆಯಲ್ಲಿರುವ ಅಕ್ಷರ ಅಕಾಡೆಮಿಯಲ್ಲಿ ಈಚೆಗೆ ನಡೆದ ಬುಕ್ ಮಾತು ಏಳನೇ ಸರಣಿ ಕಾರ್ಯಕ್ರಮದಲ್ಲಿ ಮಾಗಧ ಕೃತಿ ಕುರಿತು ಮಾತನಾಡಿದ ಅವರು, ತಾವು ಐಟಿ ಕ್ಷೇತ್ರದ ವಿವಿಧ ಹುದ್ದೆಗಳಲ್ಲಿ ಸುಮಾರು 18 ವರ್ಷಗಳ ಅನುಭವ ಹೊಂದಿದ್ದು, ಅಂಕಣಗಳ ಮೂಲಕ ಬರವಣಿಗೆ ಆರಂಭಿಸಲಾಗಿತ್ತು. 2014ರಲ್ಲಿ ಕನ್ನಡಪ್ರಭ ಪತ್ರಿಕೆಯಲ್ಲಿ ಪ್ರತಿ ಮಂಗಳವಾರ ಕನ್ನಡಿ ಎಂಬ ಅಂಕಣದಡಿ ಪ್ರಕಟವಾಗುತ್ತಿದ್ದ ಲೇಖನಗಳು ಈಗ ಪುಸ್ತಕದ ರೂಪದಲ್ಲಿ ಲಭ್ಯವಿವೆ.

2016ರಲ್ಲಿ ಚೊಚ್ಚಲ ಕಾದಂಬರಿ ಕ್ಷಮೆ ಪ್ರಕಟವಾಗಿದ್ದು, ಅದು ಈವರೆಗೆ ನಾಲ್ಕು ಮುದ್ರಣ ಕಂಡು ಮರಾಠಿಯಲ್ಲಿ ಪ್ರಕಟವಾಗಲು ಸಿದ್ಧವಾಗಿದೆ.

2018ರಲ್ಲಿ ಕಶ್ಮೀರವನ್ನು ಕಥಾವಸ್ತುವನ್ನಾಗಿಸಿಕೊಂಡ ಕಶೀರ ಕಾದಂಬರಿ ಪ್ರಕಟವಾಗಿದೆ. ಕೃತಿಗೆ ಹಿರಿಯ ಕವಿ ಎಸ್.ಎಲ್. ಭೈರಪ್ಪ ಅವರ ಮುನ್ನುಡಿಯ ರೂಪದ ಹಾರೈಕೆ ದೊರೆತಿದೆ.

ಅದು ಈವರೆಗೆ ಒಂಭತ್ತು ಮುದ್ರಣ ಕಂಡಿದ್ದು, ಹಿಂದಿ, ಆಂಗ್ಲ ಹಾಗೂ ಮರಾಠಿ ಭಾಷೆಗಳಿಗೆ ಅನುವಾದಗೊಂಡಿದೆ. ಈ ಕೃತಿಗೆ ಸೂರ್ಯನಾರಾಯಣ ಚಡಗ ಪ್ರಶಸ್ತಿ ಲಭಿಸಿದೆ. 2020ರಲ್ಲಿ 3ನೇ ಕೃತಿ ಅವಸಾನ ಪ್ರಕಟವಾಗಿದ್ದು, ಮರಾಠಿ ಭಾಷೆಯಲ್ಲಿ ಲಭ್ಯವಿದೆ. ಕಳೆದ ನ.8 ರಂದು ಅಶೋಕನನ್ನು ಕುರಿತ ಐತಿಹಾಸಿಕ ಕಾದಂಬರಿ ಮಾಗಧ ಪ್ರಕಟಗೊಂಡಿದ್ದು, ಅಪಾರ ಜನಮನ್ನಣೆ ಗಳಿಸಿ ಮರು ಮುದ್ರಣಗಳನ್ನು ಕಾಣುತ್ತಿದೆ ಎಂದು ಹೇಳಿದರು.

ಅಕ್ಷರ ಅಕಾಡೆಮಿ ಮತ್ತು ಅಕ್ಷರ ಬುಕ್ ಹೌಸ್ ಸಂಸ್ಥಾಪಕ ಬಿ.ಕೆ. ಟೈಮ್ಸ್ ಗಂಗಾಧರ್ ಮಾತನಾಡಿ, ಎಲ್ಲಾ ಕಡೆ ಬುಕ್ ಮಾತು ಕಾರ್ಯಕ್ರಮಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿರುವುದು ನಮ್ಮ ಆತ್ಮವಿಶ್ವಾಸ ಹೆಚ್ಚಿಸಿದೆ. ಮುಂದಿನ ದಿನಗಳಲ್ಲಿ ನಾವು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಪುಸ್ತಕ ಪ್ರಿಯರ ನಿರೀಕ್ಷೆಯಲ್ಲಿದ್ದೇವೆ.

ಬುಕ್ ಮಾತು ಕಾರ್ಯಕ್ರಮಕ್ಕೆ ಬರುವ ಒಬ್ಬೊಬ್ಬ ಓದುಗರು ಕೂಡ ಬಹಳ ವಿಶೇಷ. ಹಾಸನದಲ್ಲೊಂದು ಪುಸ್ತಕ ಪ್ರೀತಿಯ ಬಳಗ ಕಟ್ಟುವುದು ನಮ್ಮ ಕನಸಾಗಿದ್ದು, ನಮ್ಮ ಕನಸಿಗೆ ಎಲ್ಲರ ಸಹಕಾರ ಬೇಕಿದೆ ಎಂದರು.

ಕಾರ್ಯಕ್ರಮದಲ್ಲಿ ಹಾಸನ ಆಕಾಶವಾಣಿ ಉದ್ಘೋಷಕಿ ಚೈತ್ರವತಿ ಅವರು ಗೀತ ಗಾಯನ ನಡೆಸಿಕೊಟ್ಟರು. ಅಕ್ಷರ ಅಕಾಡೆಮಿ ನಿರ್ದೇಶಕರಾದ ಶ್ರೀನಾಥ್ ಹಾಗೂ ಕಾರ್ತಿಕ್, ಅಕ್ಷರ ಬುಕ್ ಹೌಸ್ ವ್ಯವಸ್ಥಾಪಕ ಮಂಜುನಾಥ್, ಮಮತಾ ಪ್ರಭು ಇತರರಿದ್ದರು.

## ಕರಾಟೆ ಬೆಲ್ಟ್ ಟೆಸ್ಟ್ ಪರೀಕ್ಷೆ



ಹಾಸನ: ನಗರದ ಮಹಾರಾಜ್ ಪಾರ್ಕಿನಲ್ಲಿ ಅಮೆಚೂರ್ ಬಾಡಿಬಿಲ್ಡರ್ ಹಾಗೂ ICSE ಐಸಿಎಸ್‌ಇ ಕರಾಟೆ ಸಂಸ್ಥೆ , ವರ್ಲ್ಡ್ ಟ್ರೆಡಿಷನಲ್ ಕರಾಟೆ ಡೋ ಯೂನಿಯನ್ ಹಾಸನ ಇವರ ವತಿಯಿಂದ ಭಾನುವಾರ ಕರಾಟೆ ಬೆಲ್ಟ್ ಟೆಸ್ಟ್ ಪರೀಕ್ಷೆ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರಿಗೆ, ಪದ್ಮ ಶ್ರೀ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನಾ ಸಮಾರಂಭ ಯಶಸ್ವಿಯಾಗಿ ಜರುಗಿತು.

ಒಂದು ದಿನ ನಡೆದ ಪರೀಕ್ಷೆಯಲ್ಲಿ ನೂರಾರು ಕರಾಟೆ ಪಟುಗಳು ಭಾಗವಹಿಸಿ ಕರಾಟೆ ಪ್ರದರ್ಶನ ಮಾಡುವ ಮೂಲಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಆಯಾಯ ಬೆಲ್ಟ್ ಹಾಗೂ ಸರ್ಟಿಫಿಕೇಟ್ ಪಡೆದುಕೊಂಡರು.

ಕಾರ್ಯಕ್ರಮದಲ್ಲಿ ಪದ್ಮಶ್ರೀ ಪುರಸ್ಕೃತರಾದ ಹಾಸನ್ ರಘು, ರಾಷ್ಟ್ರೀಯ ದೇಹದಾಢ್ಯಪಟು ಸಾಗರ್ ಸೇರಿದಂತೆ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಸನ್ಮಾನಿತರಾದ ಕುಮಾರ್, ಕರಾಟೆಪಟುಗಳಾದ ಆರ್ಯನ್ ಬಿ.ವಿ. ಅನುಷ್ಕಾ ಆರ್ .ವಿ ಹಾಗೂ ಕೇರಳ ರಾಜ್ಯದಲ್ಲಿ ನಡೆದ ರಾಷ್ಟ್ರೀಯ ಮಟ್ಟದ ಕರಾಟೆ ಪಂದ್ಯಾವಳಿಯಲ್ಲಿ ಗೆಲುವು ಪಡೆದ ಲಕ್ಷ್ಮೀತ, ದೋನಿಕ ಕೆ.ಕೆ ಹಾಗೂ ಭಾಗವಹಿಸಿದ ಕರಾಟೆ ಪಟುಗಳನ್ನು ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಕೇರಳ ರಾಜ್ಯದಲ್ಲಿ ನಡೆದ ಅಂತ ರಾಷ್ಟ್ರೀಯ ಕರಾಟೆಪಂದ್ಯಾವಳಿಯಲ್ಲಿ ಕರ್ನಾಟಕ ರಾಜ್ಯದಿಂದ ಹಾಸನ ಕರಾಟೆ ಮಕ್ಕಳ ಸಾಧನೆ ಲಭಿಸಿದ ಬೃಹತ್ ಗಾತ್ರದ ಟ್ರೋಪಿ ಪ್ರದರ್ಶನ ಮಾಡಲಾಯಿತು.. ಗಣ್ಯರು, ಪೋಷಕರು, ಪ್ರೇಕ್ಷಕರು ಮಕ್ಕಳ ಸಾಧನೆಗೆ ಶ್ಲಾಘನೆ ವ್ಯಕ್ತಪಡಿಸಿದರು.

ಕಾರ್ಯಕ್ರಮ ಪ್ರಾರಂಭದಲ್ಲಿ ಮಕ್ಕಳು ಮಲ್ಲಕಂಬ ಪ್ರದರ್ಶನ ಮಾಡಿ ಮೆಚ್ಚುಗೆ ಪಡೆದುಕೊಂಡರು.

ಕಾರ್ಯಕ್ರಮದಲ್ಲಿ ನಗರಸಭೆ ಅಧ್ಯಕ್ಷ ಚಂದ್ರೇಗೌಡ, ನಗರಸಭೆ ಸದಸ್ಯ ಕಮಲ್ ಕುಮಾರ್ ,ಮಾಜಿ ಸದಸ್ಯ ಹೆಚ್.ಎಂ. ಸುರೇಶ್ ಕೇರಳದ ಕಾಜು ಕರಾಟೆ ಗ್ರಾಂಡ್ ಮಾಸ್ಟರ್ ದೀಲಿಪ್ ಕುಮಾರ್, ಕ್ರೀಡಾಪರೀಷತ್ ಜಿಲ್ಲಾಧ್ಯಕ್ಷ ವೆಂಕಟೇಶ್ ಮೂರ್ತಿ, ಕಾರ್ಯಾಧ್ಯಕ್ಷ ಕೆ.ಎಸ್ ಎನ್ ಮೂರ್ತಿ, ಎನ್ ಟಿಸಿ ಮಾನವ ಸಂಪನ್ಮೂಲ ಅಧಿಕಾರಿ ನಿತ್ಯವತಿ, ಮಧು ಬಿ.ಎಸ್.ಕೃಷ್ಣಪ್ಪ ,ಹಿರಿಯ ಪತ್ರಕರ್ತರಾದ ಆರ್.ಪಿ.ವೆಂಕಟೇಶ್ ಮೂರ್ತಿ, ಪಂಜಕುಸ್ತಿ ಸಂಸ್ಥೆ ಅಧ್ಯಕ್ಷ ಗಿರೀಗೌಡ, ನಿರಂಜನ್, ಬಾನುಮತಿ, ವೈಚಾರಿಕ ಪತ್ರಿಕೆ ಸಂಪಾದಕ ವೆಂಕಟೇಶ್ ಬ್ಯಾಕರವಳ್ಳಿ, ಹಿರಿಯ ವರದಿಗಾರ ಜಿ.ಜಯಂತ್ , ಜಿಲ್ಲಾ ವೆಯ್ಟ್ ಲಿಫ್ಟರ್ಸ್ ಸಂಸ್ಥೆ ಅಧ್ಯಕ್ಷ ಸುರೇಶ್ ಕುಮಾರ್ ಇನ್ನಿತರರು ಇದ್ದರು.

## ಗೋವಾ ಮದ್ಯ ಸಾಗಣೆ ಇಬ್ಬರ ಸೆರೆ

ಹಾಸನ: ತಾಲ್ಲೂಕಿನ ಯಲಗುಂದ ಗ್ರಾಮದ ಬಳಿ ಅಬಕಾರಿ ಪೊಲೀಸರು ಖಚಿತ ಮಾಹಿತಿ ಮೇರೆಗೆ ಕಾರ್ಯಾಚರಣೆ ನಡೆಸಿ, ಅಕ್ರಮವಾಗಿ ಗೋವಾ ಮದ್ಯ ಸಾಗಿಸುತ್ತಿದ್ದ ಇಬ್ಬರನ್ನು ಬಂಧಿಸಿದ್ದಾರೆ.

ಹಾಸನ ಮೂಲದ ಲೋಕೇಶ್ ಮತ್ತು ರಮೇಶ್ ಬಂಧಿತರು.

ಯುವಕರ ಗುಂಪು, ಕೆಎ–52–ಎ–0626 ನೋಂದಣಿ ಸಂಖ್ಯೆಯ ಟಿಟಿ ವಾಹನದಲ್ಲಿ 750 ಎಂಎಲ್ ಸಾಮರ್ಥ್ಯದ 12 ಬಾಟಲ್ ಗೋವಾ ಮದ್ಯವನ್ನು ತುಂಬಿಸಿಕೊಂಡು ಪುರದಮ್ಮ ದೇವಾಲಯದ ಕಡೆಗೆ ತೆರಳುತ್ತಿದ್ದರು. ಇವರನು ತಡೆದ ಪೊಲೀಸರು, ಪರಿಶೀಲನೆ ನಡೆಸಿದಾಗ ಅಕ್ರಮ ಮದ್ಯ ಪತ್ತೆಯಾಗಿದೆ. ಕೂಡಲೇ ವಾಹನ ಮತ್ತು ಮದ್ಯ ವಶಪಡಿಸಿಕೊಂಡು ಆರೋಪಿಗಳನ್ನು ಬಂಧಿಸಿದ್ದಾರೆ.

## ಇವತ್ತಿನ ರಾಜಕಾರಣ ವಿಶ್ವಾಸಾರ್ಹತೆಯನ್ನೇ ಕಳೆದುಕೊಂಡಿದೆ: ಎ.ಟಿ.ರಾಮಸ್ವಾಮಿ ವಿಷಾದ

ಹಾಸನ: ಇವೊತ್ತಿನ ರಾಜಕಾರಣ ವಿಶ್ವಾಸಾರ್ಹತೆಯನ್ನೇ ಕಳೆದುಕೊಂಡಿದೆ. ರಾಜಕೀಯ ಕ್ಷೇತ್ರವು ಕಲುಷಿತಗೊಂಡಿದೆ ಎಂದು ಚಿಂತಕ ಹಾಗೂ ಮಾಜಿ ಶಾಸಕ ಎ.ಟಿ. ರಾಮಸ್ವಾಮಿ ನುಡಿದರು.

ನಗರದ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಸೋಮವಾರ ಸಂಜೆ 'ಕನ್ನಡ ಪತ್ರಿಕೋದ್ಯಮದ ಸವಾಲುಗಳು' ವಿಚಾರಗೋಷ್ಠಿ ಹಾಗೂ ಮಾಧ್ಯಮ ಅಕಾಡೆಮಿ ದತ್ತಿ ಪ್ರಶಸ್ತಿ ಪುರಸ್ಕೃತರಾದ ಉದಯ ವರದಿ ಪತ್ರಿಕೆ ಸಂಪಾದಕ ವೆಂಕಟೇಶ್ ಅವರಿಗೆ ಏರ್ಪಡಿಸಿದ್ದ ಸನ್ಮಾನ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಪ್ರಜಾಪ್ರಭುತ್ವ ವ್ಯವಸ್ಥೆ ಅಧಃ ಪತನಕ್ಕಿಳಿಯುತ್ತಿದೆ. ಶಾಸಕಾಂಗ, ಕಾರ್ಯಾಂಗ ಹಾಗೂ ಪತ್ರಿಕಾ ರಂಗ ಸೇರಿ ಎಲ್ಲಾ ಕ್ಷೇತ್ರಗಳಲ್ಲೂ ಗೊಂದಲಮಯ ವಾತಾವರಣ ಇದೆ. ಈ ಬಗ್ಗೆ ಗಂಭೀರ ಚಿಂತನೆ ನಡೆಸಬೇಕಾದ ಅಗತ್ಯವಿದೆ ಎಂದು ಅವರು ಪ್ರತಿಪಾದಿಸಿದರು.

ಸರ್ಕಾರಗಳು ಕೂಡ ಜನರ ವಿಶ್ವಾಸವನ್ನು ಕಳೆದುಕೊಳ್ಳುತ್ತಿವೆ. ರಾಜಕೀಯ ಪಕ್ಷಗಳ ಮುಖಂಡರು ಹಾಗೂ ರಾಜಕಾರಣಿಗಳು ಪರಸ್ಪರ ಕೆಸರೆರಚಾಟದಲ್ಲೇ ತೊಡಗಿದ್ದಾರೆ. ಅಭಿವೃದ್ಧಿ ಕೆಲಸ ಗೌಣವಾಗಿದೆ ಎಂದು ಪರೋಕ್ಷವಾಗಿ ರಾಜ್ಯ ಸರ್ಕಾರದ ನಡೆಯನ್ನು ಟೀಕಿಸಿದರು.

ಕನ್ನಡ ಪತ್ರಿಕೋದ್ಯಮಕ್ಕೆ ಮಾತ್ರ ಸವಾಲುಗಳಿಲ್ಲ. ಎಲ್ಲಾ ಕ್ಷೇತ್ರಗಳು ಕೂಡ ಸವಾಲಿನಿಂದ ಕೂಡಿವೆ. ಸದ್ಯ ಬಲಾಢ್ಯರು ಈ ಸನ್ನಿವೇಶದಲ್ಲಿ ಮೇಲುಗೈ ಸಾಧಿಸುತ್ತಿದ್ದಾರೆ. ಇದೊಂದು ಅಸಹನೀಯ ಎಂದು ಎ.ಟಿ.ರಾಮಸ್ವಾಮಿ ಕಳವಳ ವ್ಯಕ್ತಪಡಿಸಿದರು.

ಜಿಲ್ಲೆಯಲ್ಲಿ ಚಳವಳಿಯಲ್ಲಿ ತೊಡಗಿಸಿಕೊಂಡಿರುವವರು ಸಾಕಷ್ಟು ಜನ ಇದ್ದಾರೆ. ಚಳವಳಿಯಲ್ಲಿದ್ದವರು ಪತ್ರಿಕೆಗಳನ್ನು ಹುಟ್ಟು ಹಾಕಿದರು. ಜಿಲ್ಲಾ ಪತ್ರಿಕೋದ್ಯಮ ಕೂಡ ಮಾದರಿಯಾಗಿದೆ. ಈ ನಿಟ್ಟಿನಲ್ಲಿ ಹಲವು ಹಿರಿಯ ಪತ್ರಕರ್ತರು ಮಾದರಿಯಾಗಿದ್ದಾರೆ ಎಂದು ಅವರು ನೆನಪಿಸಿಕೊಂಡರು.



ವಿಚಾರ ಮಂಡಿಸಿದ ರಾಜ್ಯ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಅವರು, ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿಗಳನ್ನೇ ಹರಿಯ ಬಿಡುತ್ತಿದ್ದಾರೆ. ಇದರಿಂದ ನೈಜ ಪತ್ರಕರ್ತರಿಗೆ ಕಸಿವಿಸಿಯಾಗುತ್ತಿದೆ ಎಂದರು.

ಇವೊತ್ತು ಸುಳ್ಳು ಸುದ್ದಿಗಳೇ ವೈಭವೀಕರಣಗೊಳ್ಳುತ್ತಿವೆ. ಸಾವಿರ ಸಾವಿರ ಸುಳ್ಳು ಸುದ್ದಿಗಳು ಹರಿದಾಡುತ್ತಿವೆ. ಇಂತಹ ಪರಿಸ್ಥಿತಿಯಲ್ಲಿ ಪತ್ರಕರ್ತರು ನೈಜ ಸುದ್ದಿಗಳನ್ನು ಹೆಕ್ಕಿ ತೆಗೆದು ಜನರಿಗೆ ನೀಡಬೇಕಾದ ಗುರುತರವಾದ ಹೊಣೆ ಇದೆ. ಪತ್ರಕರ್ತರು ಹಿಂದೆಂದಿಗಿಂತ ಈಗ ಜನಪರ ಹಾಗೂ ಕ್ರಿಯಾಶೀಲವಾಗಿ ಕೆಲಸ ಮಾಡಬೇಕು ಎಂದು ಹೇಳಿದರು.

ಜಿಲ್ಲಾ ಪ್ರಾದೇಶಿಕ ಮತ್ತು ಸಣ್ಣ ಪತ್ರಿಕೆಗಳ ಸಂಪಾದಕರ ಸಂಘದ ಅಧ್ಯಕ್ಷ ಜೆ.ಆರ್.ಕೆಂಚೇಗೌಡ ಮಾತನಾಡಿ, ಪತ್ರಕರ್ತರೆಂದು ಹೇಳಿಕೊಳ್ಳುವ ಹಲವರು ಅನ್ಯ ಮಾರ್ಗ ಹಿಡಿದಿದ್ದಾರೆ. ವಸೂಲಿಯಲ್ಲೂ ತೊಡಗಿದ್ದಾರೆ. ಇವೆಲ್ಲವನ್ನೂ ನಿಭಾಯಿಸಲೇಬೇಕಿದೆ. ಸಂಘದ ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು ಅವರು ಈ ವಿಚಾರಗಳ ಬಗ್ಗೆ ಗಮನ ಹರಿಸಬೇಕು ಎಂದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಚ್.ಎಲ್.ಮಲ್ಲೇಶ ಗೌಡ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಜಿಲ್ಲೆಯಲ್ಲಿನ ಪತ್ರಕರ್ತರು ರಾಜ್ಯ ಮಟ್ಟದಲ್ಲಿ ಗುರುತಿಸಿಕೊಂಡು ಮುಂಚೂಣಿಯಲ್ಲಿದ್ದಾರೆ. ಇದೇ ಸಾಲಿನಲ್ಲಿ ಬರಲಿರುವ ಪತ್ರಕರ್ತರು ಕೂಡ ಛಾಪು ಮೂಡಿಸಬೇಕು ಎಂದು ಆಶಿಸಿದರು.

ಸಿಐಟಿಯು ಮುಖಂಡ ಧರ್ಮೇಶ್ ಆಶಯ ನುಡಿಗಳನ್ನಾಡಿದರು. ರಾಜ್ಯ ಪತ್ರಕರ್ತರ ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ರವಿ ನಾಕಲಗೂಡು, ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಬಿ.ಕೆ.ಮಂಜುನಾಥ್ ಮಾತನಾಡಿದರು.

ಇದೇ ಸಂದರ್ಭದಲ್ಲಿ ಮಾಧ್ಯಮ ಅಕಾಡೆಮಿ ದತ್ತಿ ಪ್ರಶಸ್ತಿ ಪುರಸ್ಕೃತ ವೆಂಕಟೇಶ್ ಅವರನ್ನು ಪತ್ರಿಕಾ ಬಳಗ ಸೇರಿದಂತೆ ಜಿಲ್ಲೆಯ ವಿವಿಧ ಸಂಘಟನೆಗಳ ಮುಖಂಡರು, ವೈದ್ಯರು, ಸಮಾಜ ಸೇವಕರು, ಕನ್ನಡಪರ ಸಂಘಟನೆಗಳ ಮುಖಂಡರು ಆತ್ಮೀಯವಾಗಿ ಗೌರವಿಸಿದರು.

ಸ್ವಾಗತ ಮತ್ತು ನಿರ್ವಹಣೆಯನ್ನು ಸ್ಫೂರ್ತಿ ಕಲಾ ಮಹಿಳಾ ಸಮಾಜದವರು ನಿರ್ವಹಿಸಿದರು. ಪ್ರಸಾದ್ ಗಾನ ಸುಧೆ ಹರಿಸಿದರು.

ಕಾರ್ಯಕ್ರಮದಲ್ಲಿ ವೀರಶೈವ ಮುಖಂಡ ಕಟ್ಟಾಯ ಶಿವಕುಮಾರ್, ಜಿಲ್ಲಾ ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಕೆ.ಎಂ.ಶ್ರೀನಿವಾಸ್, ಗುತ್ತಿಗೆದಾರ ಆರ್.ವಿ.ಕೃಷ್ಣೇಗೌಡ, ಉದಯವರದಿ ಪತ್ರಿಕೆಯ ವ್ಯವಸ್ಥಾಪಕ ವಿ.ಪಿ.ಲೋಕೇಶ್, ಸಹ ಸಂಪಾದಕ ವೈ.ಬಿ.ವಿರೂಪಾಕ್ಷ, ವರದಿಗಾರ ಸಾ.ಸು.ವಿಶ್ವನಾಥ್ ಹಾಗೂ ಏಕಲವ್ಯ ಜೀವಜಲ ಫೌಂಡೇಶನ್, ಜಿಲ್ಲಾ ಮುದ್ರಣಕಾರರ ಸಂಘ, ವಿವಿಧ ದಲಿತ, ಜನಪರ ಸಂಘಟನೆಗಳ ಮುಖಂಡರು ಇನ್ನಿತರರು ಇದ್ದರು.

# ಇಂತಹ ಹಣ್ಣುಗಳಿಗೆ ಕ್ಯಾನ್ಸರ್ ಕಾಯಿಲೆಯನ್ನು ತಡೆಯುವ ಪವರ್ ಇದೆ!

ಆಧುನಿಕ ಜೀವನ ಶೈಲಿ ಹಾಗೂ ಇತರ ಕೆಲವೊಂದು ಕಾರಣಗಳಿಂದ ಕಾಡುವಂತಹ ಮಾರಕ ಕಾಯಿಲೆ ಎಂದರೆ ಅದು ಕ್ಯಾನ್ಸರ್. ಹೀಗಾಗಿ ಆರೋಗ್ಯ ಕಾರಿ ಜೀವನಶೈಲಿಯ ಜೊತೆಗೆ ಕೆಲವೊಂದು ಹಣ್ಣುಗಳನ್ನು ಸೇವನೆ ಮಾಡುತ್ತಾ ಬಂದರೆ ಕ್ಯಾನ್ಸರ್ ಕಾಯಿಲೆಗಳನ್ನು ಗುಣ ಪಡಿಸಬಹುದು

ನಿಸರ್ಗದತ್ತವಾಗಿ ಸಿಗುವ ಪ್ರತಿಯೊಂದು ಹಣ್ಣುಗಳು ಕೂಡ ಅಷ್ಟೇ ಆರೋಗ್ಯಕ್ಕೆ ಬಹಳ ಒಳ್ಳೆಯದು ಎನ್ನುವ ವಿಚಾರ ನಮಗೆಲ್ಲಾ ಗೊತ್ತೇ ಇದೆ. ತಮ್ಮಲ್ಲಿ ಅಧಿಕ ಪ್ರಮಾಣದಲ್ಲಿ ಪೋಷಕಾಂಶ ಗಳನ್ನು ಹೊಂದಿರುವ ಇಂತಹ ಹಣ್ಣುಗಳು, ಮನುಷ್ಯನ ಆರೋಗ್ಯಕ್ಕೆ ಬಹಳ ಒಳ್ಳೆಯದು ಎನ್ನುವುದು ಈಗಾಗಲೇ ಹಲವಾರು ಬಾರಿ ಸಾಬೀತಾಗಿದೆ.

ಇದಕ್ಕೆಲ್ಲಾ ಮುಖ್ಯ ಕಾರಣ, ಇಂತಹ ಹಣ್ಣುಗಳಲ್ಲಿ ಸಿಗುವ ನೈಸರ್ಗಿಕ ಸಕ್ಕರೆಯಾಂಶ, ವಿವಿಧ ಬಗೆಯ ವಿಟಮಿನ್ಸ್‌ಗಳು, ಖನಿಜಾಂಶಗಳು, ದೀರ್ಘ ಕಾಲದ ಕಾಯಿಲೆಗಳ ವಿರುದ್ಧ ಹೋರಾಡಿ, ನಮ್ಮ ಆರೋಗ್ಯಕ್ಕೆ ಏನೂ ಸಮಸ್ಯೆಗಳು ಬರದೇ ಇರುವ ಹಾಗೆ ನೋಡಿಕೊಳ್ಳುತ್ತದೆ. ಬನ್ನಿ ಇಂದಿನ ಲೇಖನದಲ್ಲಿ ಕ್ಯಾನ್ಸರ್ ವಿರುದ್ಧ ಹೋರಾಡುವ ಗುಣವಿರುವ ಹಣ್ಣುಗಳ ಬಗ್ಗೆ ನೋಡೋಣ...

ಮೂಸಂಬಿ, ಕಿತ್ತಳೆ ಹಣ್ಣುಗಳು

ಸಿಟ್ರಸ್ ಹಣ್ಣುಗಳಾಗಿರುವಂತಹ ಮೂಸಂಬಿ, ಕಿತ್ತಳೆ ಹಣ್ಣುಗಳ ಪ್ರಯೋಜನಗಳು ನಮಗೆಲ್ಲಾ ಗೊತ್ತೇ ಇದೆ. ಇವುಗಳಲ್ಲಿ ವಿಟಮಿನ್ ಸಿ ಅಂಶ ಹೇರಳವಾಗಿ ಕಂಡು ಬರುವುದರ ಜೊತೆಗೆ ಆಂಟಿಆಕ್ಸಿಡೆಂಟ್ ಪ್ರಮಾಣ ಕೂಡ ಹೇರಳವಾಗಿ ಸಿಗುವುದ ರಿಂದ, ಕ್ಯಾನ್ಸರ್ ಕಾಯಿಲೆಯ ಅಪಾಯವನ್ನು ತಡೆಯಬಲ್ಲದು.

ಹೀಗಾಗಿ ವಾರದಲ್ಲಿ ಎರಡು-ಮೂರು ಬಾರಿಯಾದರೂ, ಇಂತಹ ಹಣ್ಣುಗಳನ್ನು ಸೇವನೆ ಮಾಡುವುದರಿಂದ, ಅಥವಾ ಈ ಹಣ್ಣುಗಳನ್ನು ಬಳಸಿ ಮಾಡಿದಂತಹ ಜ್ಯೂಸ್ ಕುಡಿಯುವುದರಿಂದ ಕ್ಯಾನ್ಸರ್ ಅಪಾಯವು ತುಂಬಾ ಕಡಿಮೆ ಎಂದು ಜಪಾನ್‌ನಲ್ಲಿ ನಡೆಸಿರುವಂತಹ ಅಧ್ಯಯನಗಳು ಹೇಳಿವೆ.?

ಸೇಬು ಹಣ್ಣುಗಳು

ದಿನಕ್ಕೊಂದು ಸೇಬು ತಿಂದರೆ ವೈದ್ಯರಿಂದ ದೂರವಿರ ಬಹುದು ಎನ್ನುವ ನಾಣ್ಣುಡಿ ನಮಗೆಲ್ಲಾ ಗೊತ್ತೇ ಇದೆ. ಅದು ನಿಜ ಕೂಡ. ಪ್ರಮುಖವಾಗಿ ಸೇಬಿನಲ್ಲಿ ಹಲವಾರು ಬಗೆಯ ಪೌಷ್ಟಿಕ ಸತ್ವಗ ಜೊತೆಗೆ ಪೋಷಕಾಂಶಗಳು ಕೂಡ ಅಧಿಕ ಪ್ರಮಾಣದಲ್ಲಿ ಸಿಗುವುದರಿಂದ, ಮನುಷ್ಯ ನನ್ನು ಅನಾರೋಗ್ಯದಿಂದ ದೂರವಿಡಲು ನೆರವಾಗುವುದು.

ಹೀಗಾಗಿ, ಇದರ ಸಂಪೂರ್ಣ ಆರೋಗ್ಯ ಪ್ರಯೋಜನ ಗಳನ್ನು ಪಡೆಯಲು, ದಿನಕ್ಕೊಂದು ಸೇಬು ತಿನ್ನುವ ಅಭ್ಯಾಸ ಮಾಡಿ ಕೊಂಡರೆ ಬಹಳ ಒಳ್ಳೆಯದು. ಇದರಿಂದ ಹಲವಾರು ಕಾಯಿಲೆ ಗಳು ನಮ್ಮಿಂದ ದೂರವಾಗುವುದರ ಜೊತೆಗೆ, ಕ್ಯಾನ್ಸರ್‌ನ ಅಪಾಯ ಕೂಡ ಕಡಿಮೆ ಅಗು ವುದು. ಪ್ರಮುಖವಾಗಿ ಸ್ತನ ಕ್ಯಾನ್ಸರ್, ಕರುಳಿನ ಕ್ಯಾನ್ಸರ್ ಹಾಗೂ ಶ್ವಾಸಕೋಶದ ಕ್ಯಾನ್ಸರ್ ನಂತಹ ಭಯಾನಕ ಕಾಯಿಲೆಯನ್ನುತಡೆಯುವುದು.

ಟೊಮೆಟೊ ಹಣ್ಣುಗಳು

ಕೆಲವು ಬಗೆಯ ಖತರ್ನಾಕ್ ಕ್ಯಾನ್ಸರ್ ಕಾಯಿಲೆಗಳಿಗೆ, ಟೊಮೆಟೊ ಹಣ್ಣು ಪರಿಹಾರವಾಗಿ ಕೆಲಸ ಮಾಡುತ್ತದೆ.

ಉದಾಹರಣೆಗೆ ನೋಡುವುದಾದರೆ, ಲಿವರ್ ಕ್ಯಾನ್ಸರ್ ಶ್ವಾಸ ಕೋಶದ ಕ್ಯಾನ್ಸರ್, ಕರುಳಿನ ಕ್ಯಾನ್ಸರ್, ಸ್ತನ ಕ್ಯಾನ್ಸರ್ ಇಂತಹ ಭಯಾನಕ ಕ್ಯಾನ್ಸರ್ ಕಾಯಿಲೆಗಳಿಗೆ ಟೊಮೆಟೊ ಹಣ್ಣುಗಳು ರಾಮಬಾಣವಾಗಿ ಕೆಲಸ ಮಾಡುತ್ತದೆ.

ಇದಕ್ಕೆ ಪ್ರಮುಖ ಕಾರಣ ಈ ಹಣ್ಣಿನಲ್ಲಿ ಆಂಟಿ ಆಕ್ಸಿ ಡೆಂಟ್ ಅಂಶಗಳು ಅಗಾಧ ಪ್ರಮಾಣದಲ್ಲಿ ಕಂಡು ಬರುವುದರ ಜೊತೆಗೆ ಲೈಕೋಪಿನ್ ಅನ್ನುವ ಸಂಯುಕ್ತ ಅಂಶ, ಈ ಹಣ್ಣಿನಲ್ಲಿರುವು ದರಿಂದ ಕ್ಯಾನ್ಸರ್ ವಿರುದ್ ಹೋರಾಡುವ ಎಲ್ಲಾ ಗುಣಲಕ್ಷಣ ಗಳು ಕೂಡ ಈ ಹಣ್ಣಿ ನಲ್ಲಿ ಕಂಡು ಬರುತ್ತದೆ. ?

ಡ್ರೈಫ್ರೂಟ್ಸ್‌ಗಳು

ಡ್ರೈಫ್ರೂಟ್ಸ್‌ಗಳ ಸೇವನೆ ಆರೋಗ್ಯಕ್ಕೆ ತುಂಬಾನೇ ಒಳ್ಳೆಯದು ಎನ್ನುವ ವಿಚಾರ ನಮಗೆಲ್ಲಾ ಗೊತ್ತೇ ಇದೆ. ಹೀಗಾಗಿ ಪ್ರತಿದಿನ ನಿಯಮಿತವಾಗಿ ಒಣಫಲಗಳಾದ ನೆನೆಸಿಟ್ಟ ಬಾದಾಮಿ, ಗೋಡಂಬಿ, ಒಣ ಖರ್ಜೂರ ತಿನ್ನುವುದರಿಂದ ಒಳ್ಳೆಯ ಆರೋಗ್ಯ ಪ್ರಯೋಜನ ಗಳನ್ನು ಪಡೆಯ ಬಹುದು.

ಅದರಲ್ಲೂ ಮಿತವಾಗಿ ಒಣದ್ರಾಕ್ಷಿ ಹಣ್ಣುಗಳನ್ನು ಸೇವನೆ ಮಾಡುವುದರಿಂದ ಕ್ಯಾನ್ಸರ್ ಕಾಯಿಲೆ ತೀವ್ರ ರೂಪಕ್ಕೆ ತಿರುಗ ದಂತೆ ತಡೆಯುವುದು ಎಂದು ಹೇಳ ಲಾಗಿದೆ. ಪ್ರಮುಖ ವಾಗಿ ದೊಡ್ಡ ಕರುಳಿನಲ್ಲಿ ಬೆಳೆಯುವ ಕ್ಯಾನ್ಸರ್‌ನ್ನು ಇದು ತಡೆಯುವುದು.?

# ಗರ್ಭಾವಸ್ಥೆಯಲ್ಲಿ ಎಷ್ಟನೇ ವಾರಕ್ಕೆ ಭ್ರೂಣದ ಹೃದಯ ಬಡಿತ ಕೇಳಿಸುತ್ತೆ

ಗರ್ಭಿಣಿಯರು ತಮ್ಮ ಹೊಟ್ಟೆಯಲ್ಲಿರುವ ಮಗುವಿನ ಸ್ಕ್ಯಾನಿಂಗ್ ಮಾಡುವಾಗ ವೈದ್ಯರು ಮಗುವಿನ ಹೃದಯ ಬಡಿತವನ್ನು ಕೇಳಿಸುವುದು ನಿಮಗೆ ಗೊತ್ತೇ ಇರುತ್ತದೆ. ಮಗುವಿನ ಬೆಳವಣಿಗೆಯಲ್ಲಿ ಹೃದಯ ಬಡಿತ ಪ್ರಮುಖವಾಗಿದೆ.



ಮಹಿಳೆಯು ಗರ್ಭಧರಿಸಿದಂದಿನಿಂದ ಹಿಡಿದು ಆಕೆಯು ಹೆರಿಗೆಯು ವರೆಗೆ ಹೊಟ್ಟೆಯಲ್ಲಿ ಭ್ರೂಣದ ಬೆಳವಣಿಗೆಯ ಬಗ್ಗೆ ಗಮನಹರಿಸುವುದು ಮುಖ್ಯ. ಗರ್ಭಧಾರಣೆಯ ಸಮಯದಿಂದ ಹೆರಿಗೆಯ ಕೊನೆಯ ವಾರಗಳವರೆಗೆ, ಮಗುವಿನ ಬೆಳವಣಿಗೆಯು ಗರ್ಭಾಶಯದಲ್ಲಿ ನಿರಂತರವಾಗಿರುತ್ತದೆ.

ಭ್ರೂಣದ ಬೆಳವಣಿಗೆ

ಮೊದಲ ವಾರದಿಂದ ಕೊನೆಯ ಕೆಲವು ವಾರಗಳವರೆಗೆ, ಮಗುವಿನ ದೇಹದ ಪ್ರಮುಖ ಅಂಗಗಳು ಮತ್ತು ಕಾರ್ಯಗಳು ಅಭಿವೃದ್ಧಿಗೊಳ್ಳುತ್ತವೆ. ಮಗುವಿನ ಕೈಗಳು ಕೆಲವು ವಾರಗಳಲ್ಲಿ ರೂಪುಗೊಳ್ಳಲು ಪ್ರಾರಂಭಿಸುತ್ತವೆ ಮತ್ತು ಕೆಲವು ವಾರಗಳಲ್ಲಿ ಮಗುವಿನ ಮೆದುಳು ಬೆಳವಣಿಗೆಯಾಗುತ್ತದೆ. ಮಗುವಿನ ಬೆಳವಣಿಗೆಯಲ್ಲಿ ಹೃದಯ ಬಡಿತವೂ ಒಂದು ಪ್ರಮುಖ ಮೈಲಿಗಲ್ಲಾಗಿದೆ.

ಮಗುವಿನ ಹೃದಯ ಬಡಿತ ಎಷ್ಟನೇ ವಾರದಲ್ಲಿ ಪ್ರಾರಂಭವಾಗುತ್ತದೆ

ಗರ್ಭಾವಸ್ಥೆಯ ಎಂಟನೇ ವಾರದ ಮೊದಲು ವೈದ್ಯರು ಮಗುವನ್ನು ಭ್ರೂಣ (ಎಂಬ್ರಿಯೋ )ಎಂದು ಕರೆಯುತ್ತಾರೆ. ಗರ್ಭಾವಸ್ಥೆಯ ಸುಮಾರು 5 ರಿಂದ 6 ವಾರಗಳ ಒಳಗೆ ಮಗುವಿನ ಹೃದಯದ ಅಂಗಾಂಶಗಳು ನಾಡಿಮಿಡಿತವನ್ನು ಪ್ರಾರಂಭಿಸುತ್ತವೆ ಮತ್ತು ಅಲ್ಟ್ರಾಸೌಂಡ್‌ನಲ್ಲಿ ಹೃದಯ ಬಡಿತವನ್ನು ಕೇಳಬಹುದು.

ಹೃದಯ ಇನ್ನೂ ಅಭಿವೃದ್ಧಿಯಾಗದಿದ್ದರೂ, ಬಡಿತ ಇನ್ನೂ ಕೇಳಿಸುತ್ತದೆ. ಗರ್ಭಧಾರಣೆಯ 10 ನೇ ವಾರದ ಹೊತ್ತಿಗೆ ಮಗುವಿನ ಹೃದಯವು ಸಂಪೂರ್ಣವಾಗಿ ಅಭಿವೃದ್ಧಿಗೊಳ್ಳುತ್ತದೆ.

ಹೃದಯ ಚಟುವಿಟಿಕೆ

ಹೃದಯವು ಇನ್ನೂ ಸಂಪೂರ್ಣವಾಗಿ ಅಭಿವೃದ್ಧಿಗೊಂಡಿಲ್ಲವಾದ್ದರಿಂದ ಕೆಲವೊಮ್ಮೆ ಹೃದಯಬಡಿತ ಕೇಳಿಸುವುದಿಲ್ಲ. ಅಮೇರಿಕನ್ ಕಾಲೇಜ್ ಆಫ್ ಪ್ರಸೂತಿ ಮತ್ತು ಸ್ತ್ರೀರೋಗತಜ್ಞರು ಇದನ್ನು ಹೃದಯ ಚಟುವಟಿಕೆ ಎಂದು ಕರೆಯುತ್ತಾರೆ. ಅವರ ಪ್ರಕಾರ, ಈ ಸಂದರ್ಭದಲ್ಲಿ ಮಗುವಿನ ಹೃದಯ ಬಡಿತವಿರುವುದಿಲ್ಲ.

ಅಲ್ಟ್ರಾಸೌಂಡ್ ಮುಖಾಂತರ ಹೃದಯ ಬಡಿತ ಕೇಳಿಸುತ್ತದೆ

ಗರ್ಭಿಣಿ ಮಹಿಳೆಯು ಮಗುವಿನ ಹೃದಯ ಬಡಿತವನ್ನು ಅಲ್ಟ್ರಾಸೌಂಡ್ ಯಂತ್ರದಿಂದ ಎಲೆಕ್ಟ್ರಾನಿಕ್ ಪ್ರಚೋದನೆಗಳಿಂದ ಹೃದಯ ಚಟುವಟಿಕೆಯನ್ನು ಆಲಿಸುವುದು. ಇದನ್ನು ಹೃದಯ ಬಡಿತ ಎಂದು ಕರೆಯಲಾಗುತ್ತದೆ.

ಹೃದಯವು ಅಭಿವೃದ್ಧಿ ಹೊಂದುತ್ತಿರುವ ಮಗುವಿನ ಮೊದಲ ರಚನೆಗಳಲ್ಲಿ ಒಂದಾಗಿದೆ ಏಕೆಂದರೆ ಇದು ಆಮ್ಲಜನಕ-ಭರಿತ ರಕ್ತ ಮತ್ತು ಪೋಷಕಾಂಶಗಳನ್ನು ಇತರ ಅಭಿವೃದ್ಧಿಶೀಲ ಅಂಗಗಳಿಗೆ ಒಯ್ಯುತ್ತದೆ.

ಹೃದಯ ಬಡಿತ ಕೇಳದಿದ್ದರೆ

ನಿಮ್ಮ ಮೊದಲ ಅಲ್ಟ್ರಾಸೌಂಡ್ ಸಮಯದಲ್ಲಿ ನಿಮ್ಮ ಮಗುವಿನ ಹೃದಯ ಬಡಿತವನ್ನು ನೀವು ಕೇಳಲು ಸಾಧ್ಯವಾಗದಿರಬಹುದು. ಇದು ಸಮಸ್ಯೆಯ ಲಕ್ಷಣವಲ್ಲ. 1 ರಿಂದ 2 ವಾರಗಳ ನಂತರ ವೈದ್ಯರು ಮತ್ತೊಮ್ಮೆ ಅಲ್ಟ್ರಾಸೌಂಡ್ ಅನ್ನು ಮಾಡಿಸಲು ಹೇಳಬಹುದು. ಕೆಲವೊಮ್ಮೆ ಗರ್ಭಾಶಯದ ತುದಿ, ಹೊಟ್ಟೆಯ ಗಾತ್ರವು ದೊಡ್ಡದಾಗಿದ್ದರೆ, ಮಗುವಿನ ಹೃದಯ ಬಡಿತವು ಕೇಳಿಸುವುದಿಲ್ಲ.

ಅಧ್ಯಯನದ ಪ್ರಕಾರ ಹೃದಯಬಡಿತದ ಮಾಪನ

ಹೃದಯ ಬಡಿತ ಕೇಳಿಸದಿದ್ದಾಗ ವೈದ್ಯರು ಭ್ರೂಣದ ಮಾಪನಗಳನ್ನು ತೆಗೆದುಕೊಳ್ಳುತ್ತಾರೆ. ಯುನೈಟೆಡ್ ಕಿಂಗ್‌ಡಮ್‌ನಲ್ಲಿ 325 ಮಹಿಳೆಯರ ಮೇಲೆ 1999 ರ ಅಧ್ಯಯನವು 6 ವಾರಗಳಲ್ಲಿ ಹೃದಯ ಬಡಿತವನ್ನು ಪತ್ತೆಹಚ್ಚಿದರೆ, ಗರ್ಭಧಾರಣೆಯು ಮುಂದುವರಿಯುವ 78 ಪ್ರತಿಶತದಷ್ಟು ಸಾಧ್ಯತೆಯಿದೆ ಎಂದು ತೋರಿಸಿದೆ. 8 ವಾರಗಳಲ್ಲಿ, 98 ಪ್ರತಿಶತ ಅವಕಾಶವಿದೆ, ಮತ್ತು 10 ವಾರಗಳ ನಂತರ ಅದು 99.4 ಪ್ರತಿಶತಕ್ಕೆ ಏರುತ್ತದೆ.

ಹೊಟ್ಟೆಯಲ್ಲಿರುವ ಮಗುವಿನ ಹೃದಯ ಬಡಿತ ಎಷ್ಟಿರಬೇಕು

hopkinsmedicine.org ಪ್ರಕಾರ, ಸಾಮಾನ್ಯ ಹೃದಯ ಬಡಿತವು ನಿಮಿಷಕ್ಕೆ 110 ರಿಂದ 160 ಬಡಿತಗಳಾಗಿರಬೇಕು. ಇದು ನಿಮಿಷಕ್ಕೆ 5 ರಿಂದ 25 ಬಡಿತಗಳವರೆಗೆ ಬದಲಾಗಬಹುದು. ಮಗುವಿನ ಗರ್ಭಾಶಯದ ಸ್ಥಿತಿಯನ್ನು ಅವಲಂಬಿಸಿ ಭ್ರೂಣದ ಹೃದಯ ಬಡಿತವು ಬದಲಾಗಬಹುದು. ಮಗುವಿನ ಹೃದಯ ಬಡಿತವು ಸರಿಯಾಗಿಲ್ಲದಿದ್ದರೆ, ಮಗುವಿಗೆ ಸಾಕಷ್ಟು ಆಮ್ಲಜನಕ ಸಿಗುತ್ತಿಲ್ಲ ಅಥವಾ ಸಮಸ್ಯೆ ಇದೆ ಎಂದು ಅರ್ಥ.

ಮಗುವಿನ ಹೃದಯ ಬಡಿತ ಹೇಗೆ ಕೇಳುತ್ತದೆ?

10 ನೇ ವಾರದವರೆಗೆ ಪ್ರತಿ ಪ್ರಸವಪೂರ್ವ ಭೇಟಿಯಲ್ಲಿ, ಸ್ತ್ರೀರೋಗತಜ್ಞರು ಭ್ರೂಣದ ಡಾಪ್ಲರ್‌ನೊಂದಿಗೆ ಮಗುವಿನ ಹೃದಯ ಬಡಿತವನ್ನು ಪರಿಶೀಲಿಸುತ್ತಾರೆ. ಈ ಪ್ರಕ್ರಿಯೆಯು ಸಂಪೂರ್ಣವಾಗಿ ನೋವುರಹಿತವಾಗಿರುತ್ತದೆ.

ನಾಲ್ಕನೇ ವಾರದಲ್ಲಿ, ಮಗು ಗರ್ಭಾಶಯದೊಳಗೆ ತುಂಬಾ ಬೆಳೆದಿರುತ್ತದೆ, ಈ ಸಮಯದಲ್ಲಿ ಒಂದು ಸಣ್ಣ ತಪ್ಪು ಕೂಡ ಅಂಗಗಳನ್ನು ಹಾನಿಗೊಳಿಸುತ್ತದೆ.

# ಮೂಗಿನ ಮೇಲಿನ ಬ್ಲಾಕ್ ಹೆಡ್ಸ್‌ಗೆ ಎಗ್ ವೈಟ್ ಬೆಸ್ಟ್ ಅಂತೆ!

ಕೋಳಿ ಮೊಟ್ಟೆಯ ಬಿಳಿ ಭಾಗದಿಂದ ನಮಗೆ ಎಷ್ಟೆಲ್ಲ ಉಪಯೋಗ ಇದೆ ಗೊತ್ತಾ? ಕೇವಲ ಆರೋಗ್ಯಕ್ಕೆ ಮಾತ್ರವಲ್ಲದೆ ಇದರಿಂದ ಸೌಂದರ್ಯ ಕೂಡ ಹೆಚ್ಚುತ್ತದೆ.

ಅರ್ಧಕರ್ಧ ಪ್ರೋಟೀನ್ ಮೊಟ್ಟೆಯ ಬಿಳಿ ಭಾಗದಲ್ಲಿ ಇರುತ್ತದೆ ಎಂದು ಸಂಶೋಧನೆ ಹೇಳುತ್ತದೆ. ನಮ್ಮ ದೈಹಿಕ ಆರೋಗ್ಯಕ್ಕೆ ಮಾತ್ರವಲ್ಲದೆ ನಮ್ಮ ತ್ವಚೆ ಹಾಗೂ ತಲೆಕೂದಲಿಗೆ ಕೂಡ ಇದು ಅದ್ಭುತವಾಗಿ ಕೆಲಸ ಮಾಡುತ್ತದೆ.

ಸೊಂಪಾದ ತಲೆ ಕೂದಲಿಗಾಗಿ ಹಾಗೂ ಕಲೆರಹಿತ ಚರ್ಮಕ್ಕಾಗಿ ಕೋಳಿ ಮೊಟ್ಟೆಯನ್ನು ಒಂದು ನೈಸರ್ಗಿಕ ಉತ್ಪನ್ನವಾಗಿ ಉಪಯೋಗಿಸಬಹುದು. ಮೂಗಿನ ಮೇಲೆ ಕಂಡುಬರುವ ಬ್ಲಾಕ್ ಹೆಡ್ಸ್ ಸಮಸ್ಯೆಗಳಿಗೂ ಕೂಡ ಮನೆ ಪರಿಹಾರವಾಗಿ ಎಗ್ ವೈಟ್ ಮಾಸ್ಕ್ ಉಪಯೋಗಿಸ ಬಹುದು.

ಕೋಳಿ ಮೊಟ್ಟೆಯ ಬಿಳಿ ಭಾಗ: ಇದರ ಉಪಯೋಗ ಏನು?: ಚರ್ಮದ ಮೇಲೆ ಕಂಡುಬರುವ ಬ್ಲಾಕ್ ಹೆಡ್ಸ್ ಸತ್ತ ಜೀವಕೋಶಗಳ ಗುಂಪಿನಿಂದ ಉಂಟಾ ಗುತ್ತದೆ. ಎಣ್ಣೆ ಮತ್ತು ಧೂಳಿನ ಪ್ರಮಾಣ ಒಂದೇ ಕಡೆ ಶೇಖರಣೆಯಾಗಿ ಅದು ಬ್ಲಾಕ್ ಹೆಡ್ಸ್ ಕಂಡು ಬರಲು ಕಾರಣವಾಗುತ್ತದೆ.

ಬ್ಲಾಕ್ ಹೆಡ್ಸ್ ಭಾಗದಲ್ಲಿ ಕೋಳಿ ಮೊಟ್ಟೆಯ ಬಿಳಿ ಭಾಗ ಹಚ್ಚುವುದರಿಂದ ಚರ್ಮದ ಮೇಲೆ ಉಂಟಾದ ಇಂತಹ ದೊಡ್ಡ ರಂಧ್ರಗಳು ಚಿಕ್ಕದಾಗುತ್ತವೆ ಮತ್ತು ಲೂಸ್ ಆಗಿರುವ ಚರ್ಮ ಟೈಟ್ ಆಗುತ್ತದೆ ಮತ್ತು ಇದರಿಂದ ಬ್ಲಾಕ್ಹೆಡ್ ಉತ್ಪತ್ತಿ ಆನಂತರದಲ್ಲಿ ನಿಂತು ಹೋಗುತ್ತದೆ.

ಕರ್ನಾಟಕ ಸರ್ಕಾರ

ಕಂದಾಯ ಇಲಾಖೆ

**ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಹಾಗೂ ಪುನರ್ನಿರ್ಮಾಣ ಕಾಯ್ದೆ -2013 ರ, ಕಲಂ 19(1)ಹಾಗೂ 19(2) ಮೇರೆಗೆ ಘೋಷಣೆ**

ಸಂಖ್ಯೆ: ಕಂಇ40 ಎಕ್ಯೂಹೆಚ್ 2023 ದಿನಾಂಕ: 21.01.2025

ಹೊಳೆನರಸೀಪುರ ತಾಲ್ಲೂಕು, ಚಾಕೇನಹಳ್ಳಿ ಕೆರೆಗೆ ಹೇಮಾವತಿ ನದಿಯಿಂದ ನೀರನ್ನು ಎತ್ತಿ ಕುಡಿಯುವ ನೀರಿಗಾಗಿ ನೀರು ತುಂಬಿಸುವುದು ಹಾಗೂ ಒಂಟಿಗುಡ್ಡ ಏತ ನೀರಾವರಿ ಯೋಜನೆಯ ನಾಲೆಯ ನಿರ್ಮಾಣ ಕಾಮಗಾರಿ ಉದ್ದೇಶದ ಸಲುವಾಗಿ ಅವಶ್ಯವಿರುವ ಹಾಸನ ಜಿಲ್ಲೆ, ಹೊಳೆನರಸೀಪುರ ತಾಲ್ಲೂಕು, ಹಳೆಕೋಟೆ ಹೋಬಳಿ, ಕಲ್ಲೇನಹಳ್ಳಿ ಗ್ರಾಮದ ಒಟ್ಟು 1-04 ಎಕರೆ-ಗುಂಟೆ, ಜಮೀನುಗಳ ಭೂಸ್ವಾಧೀನತೆ ಅಗತ್ಯವಾಗಿದೆ ಎಂದು, ಈ ಯೋಜನೆಗೆ ಸಂಬಂಧಿಸಿದಂತೆ, ಭೂಸ್ವಾಧೀನಪಡಿಸಿಕೊಳ್ಳುತ್ತಿರುವ ಜಮೀನುಗಳಿಗೆ ಕೇಂದ್ರ ಸರ್ಕಾರದ ಹೊಸ ಕಾಯ್ದೆ "ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್ನಿರ್ಮಾಣ ಕಾಯ್ದೆ-2013"ರ ಕಲಂ 6(2) ಅಡಿಯಲ್ಲಿ ನೀರಾವರಿ ಯೋಜನೆಗಳಿಗೆ ಕೇಂದ್ರ ಸರಕಾರದ ಪರಿಸರ ಮತ್ತು ಅರಣ್ಯ ಇಲಾಖೆಯ ದಿನಾಂಕ 30-05-2005ರ ಅಧಿಸೂಚನೆಯನ್ವಯ ಪರಿಸರದ ಮೇಲಿನ ಪರಿಣಾಮ ನಿರ್ಧರಣಾ ಅಂಶ SIA ಅನ್ವಯಿಸುವುದಿಲ್ಲವೆಂದು ಹಾಗೂ ಈ ಯೋಜನೆಗೆ ಸಂಬಂಧಿಸಿದಂತೆ EIA / SIA ವರದಿಯ ಮುಖ್ಯ ಅಂಶಗಳನ್ನು ಕಲಂ 19 ರ ಪ್ರಕಾರ ಅಧಿಸೂಚನೆ ಹೊರಡಿಸುವ ಮುನ್ನ ಪ್ರಕಟಿಸುವುದು ಎಂಬುದಾಗಿ ಹೇಳಿ ಹಾಸನ ಜಿಲ್ಲೆಯ ಜಿಲ್ಲಾಧಿಕಾರಿಗಳು ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಹಾಗೂ ಪುನರ್ನಿರ್ಮಾಣ ಕಾಯ್ದೆ- 2013 ರ ಕಲಂ 11(1)ರ ಅಡಿಯಲ್ಲಿ ಕ್ರಮಾಂಕ ಭೂ.ಸ್ವಾ: 42/2022-23 ದಿನಾಂಕ: 24-08-2023 ರಲ್ಲಿ ಅಧಿಸೂಚಿಸಿ ರಾಜ್ಯಪತ್ರದಲ್ಲಿ ದಿನಾಂಕ : 14-09-2023 ರಲ್ಲಿ ಪ್ರಕಟಿಸಿದಂತೆ, ಭೂಸ್ವಾಧೀನತೆ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಹಾಗು ಪುನರ್ನಿರ್ಮಾಣ ಕಾಯ್ದೆ-2013ರ ಕಲಂ 15 ರನ್ವಯ ಆಕ್ಷೇಪಣೆಗಳು ಸ್ವೀಕೃತವಾಗಿರುವಂತೆ ವಿಚಾರಣೆ ಕೈಗೊಂಡು ನಿಯಮಾನುಸಾರ ಕ್ರಮ ಕೈಗೊಳ್ಳಲಾಗಿರುವುದರಿಂದ ಭೂಸ್ವಾಧೀನ ಕಾಯ್ದೆ ಕಲಂ 15(3)ರ ಅನುಸಾರ ಸದರಿ ಪ್ರಕರಣದಲ್ಲಿ ಮುಂದುವರೆಯಲು ಸರ್ಕಾರದ ಪತ್ರ ಸಂಖ್ಯೆ: ಕಂಇ 40 ಎಕ್ಯೂಹೆಚ್ 2023(ಇ) ದಿನಾಂಕ: 04-01-2024 ರಡಿ ಸರ್ಕಾರದ ನಿರ್ದೇಶನ ನೀಡಲಾಗಿದೆ.

ಸಾರ್ವಜನಿಕ ಉದ್ದೇಶಕ್ಕಾಗಿ ಹೊಳೆನರಸೀಪುರ ತಾಲ್ಲೂಕು, ಚಾಕೇನಹಳ್ಳಿ ಕೆರೆಗೆ ಹೇಮಾವತಿ ನದಿಯಿಂದ ನೀರನ್ನು ಎತ್ತಿ ಕುಡಿಯುವ ನೀರಿಗಾಗಿ ನೀರು ತುಂಬಿಸುವುದು ಹಾಗೂ ಒಂಟಿಗುಡ್ಡ ಏತ ನೀರಾವರಿ ಯೋಜನೆಯ ನಾಲೆಯ ನಿರ್ಮಾಣ ಕಾಮಗಾರಿ ಉದ್ದೇಶದ ಸಲುವಾಗಿ ಅವಶ್ಯವಿರುವ ಹಾಸನ ಜಿಲ್ಲೆ, ಹೊಳೆನರಸೀಪುರ ತಾಲ್ಲೂಕು, ಹಳೆಕೋಟೆ ಹೋಬಳಿ, ಕಲ್ಲೇನಹಳ್ಳಿ ಗ್ರಾಮದ ಈ ಕೆಳಗಿನ ಅನುಸೂಚಿಯಲ್ಲಿ ಕಾಣಿಸಿರುವ ಜಮೀನುಗಳ ಸ್ವಾಧೀನತೆಯ ಅವಶ್ಯಕತೆ ಕಂಡುಬಂದಿದ್ದರಿಂದ ದಿನಾಂಕ:28.03.2022 ರಂದು ಭೂಸ್ವಾಧೀನ ಪಕ್ರಿಯೆಯಲ್ಲಿ ಪಾರದರ್ಶಕತೆ ಸೂಕ್ತ ಪರಿಹಾರದ ಹಕ್ಕು ಮತ್ತು ಪುನರ್ ನಿರ್ಮಾಣ (ಕರ್ನಾಟಕ ತಿದ್ದುಪಡಿ) ನಿಯಮಗಳು 2020 ರಲ್ಲಿ ಜಾರಿಗೆ ತರಲಾಗಿದ್ದು ಸದರಿ ನಿಯಮಗಳಲ್ಲಿ ಆರ್ & ಆರ್ ಪ್ಯಾಕೇಜ್ ಬದಲಾಗಿ ಇಡಿಗಂಟು ಮೊತ್ತವನ್ನು ನಿಗಧಿ ಪಡಿಸಲು ಅವಕಾಶ ಕಲ್ಪಿಸಿರುವುದರಿಂದ ಈ ಪ್ರಕರಣದಲ್ಲಿ ಆರ್ & ಆರ್ ಬದಲಾಗಿ ಇಡಿಗಂಟು ಮೊತ್ತವನ್ನು ಅವಾರ್ಡ್ ಸಿದ್ದ ಪಡಿಸುವ ಸಂರ್ಭದಲ್ಲಿ ಪರಿಗಣಿಸಲಾಗುವುದು.

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ-2013 ರ ಕಲಂ-19(1) ರಡಿ ಕೆಳಗೆ ಸೂಚಿಸಿರುವ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳುವುದು ಅಗತ್ಯವಿದೆಯಂದು ಕರ್ನಾಟಕ ಸರ್ಕಾರಕ್ಕೆ ಮನದಟ್ಟಾಗಿರುವುದರಿಂದ ಮೇಲೆ ತಿಳಿಸಿರುವ ಉದ್ದೇಶಕ್ಕೆ ಜಮೀನುಗಳು ಅಗತ್ಯವಾಗಿವೆಯೆಂದು ಸದರಿ ಅಧಿನಿಯಮದ 19(1) ನೇ ಪ್ರಕರಣದ ಮೇರೆಗೆ ಈ ಮೂಲಕ ಘೋಷಿಸಲಾಗಿದೆ.

ಅದರಂತೆ ಸದರಿ ಭೂಸ್ವಾಧೀನ ಅಧಿನಿಯಮ 3ನೇ ಪ್ರಕರಣದ (ಜಿ) ಖಂಡದ ಮೇರೆಗೆ ವಿಶೇಷ ಭೂಸ್ವಾಧೀನಾಧಿಕಾರಿಗಳು, ಹೇಮಾವತಿ ಜಲಾಶಯ ಯೋಜನೆ, ಹಾಸನ. ಇವರನ್ನು ಸದರಿ ಜಮೀನುಗಳ ಸ್ವಾಧೀನತೆಯ ಮುಂದಿನ ಎಲ್ಲಾ ಕಾನೂನು ಕ್ರಮ ಮತ್ತು ಪ್ರಕ್ರಿಯೆಗಳ ಕುರಿತಂತೆ ಜಿಲ್ಲಾಧಿಕಾರಿಯವರ ಪ್ರಕಾರ್ಯವನ್ನು ನಿರ್ವಹಿಸುವ ಸಲುವಾಗಿ ಈ ಮೂಲಕ ನೇಮಕ ಮಾಡಲಾಗಿದೆ.

ಸರ್ಕಾರ ಸೂಚನೆ ಸಂಖ್ಯೆ 2020 ಎಕ್ಯೂಬಿ 04 ಕಂಇ : ದಿನಾಂಕ : 28-03-2022 ರನ್ವಯ ಯೋಜನೆಗೆ ರಲ್ಲಿನ 3 & 2 ರ ಮೂಲಕ ಕಾಯ್ದೆಯ ಅಧ್ಯಾಯ 2013 ಉಪಬಂಧನಗಳನ್ನು ಅನ್ವಯಿಸುವುದರಿಂದ ವಿನಾಯಿತಿ ನೀಡಲಾಗಿರುವುದರಿಂದ ಪುನರ್ವಸತಿ ಮತ್ತು ಪುನರ್ ನಿರ್ಮಾಣದ ಅವಕಾಶಗಳನ್ನು ಬದಲಾಗಿ ನೀಡಲಾಗುವ ಒಂದು ಇಡಿಗಂಟು ಮೊತ್ತವನ್ನು ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಸೂಕ್ತ ಪರಿಹಾರದ ಹಕ್ಕು ಪುನರ್ವಸತಿ ಮತ್ತು ಪುನರ್ ನಿರ್ಮಾಣ) ಕರ್ನಾಟಕ ತಿದ್ದುಪಡಿ (5)29 ರ ನಿಯಮ 2020 ನಿಯಮಗಳು (ರಂತೆ ನಿಗದಿ ಪಡಿಸಲು ತೀರ್ಮಾನಿಸಲಾಗಿದೆ.

ಈ ಮೇಲಿನ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ ಸದರಿ ಅಧಿನಿಯಮಮ ಕಲಂ-21(1) ರಡಿ ಸಂಬಂಧಿಸಿದ ಹಿತಾಸಕ್ತದಾರರಿಗೆ ಭೂಸ್ವಾಧೀನತೆಯ ಜಮೀನುಗಳ ಕಬ್ಜಾ ಪಡೆಯುವ ಉದ್ದೇಶದ ಬಗ್ಗೆ ಹಾಗೂ ಪರಿಹಾರದ ಕ್ಲೈಮುಗಳನ್ನು ಸಲ್ಲಿಸಲು ತಿಳುವಳಿಕೆಯ ನೋಟೀಸ್ ನೀಡಿ ಮುಂದಿನ ಕ್ರಮ ಜರುಗಿಸಲು ನಿರ್ದೇಶಿಸಿದೆ.

ಸದರಿ ಅಧಿಸೂಚನೆಯಲ್ಲಿ ಒಳಪಡುವ ಜಮೀನುಗಳ ವಿವರಗಳನ್ನು ಸೂಚಿಸುವ ದು ನಕ್ಷೆಯನ್ನು ಸಾರ್ವಜನಿಕ ಹಿತಾಸಕ್ತಗಾಗಿ ಹಾಗೂ ಸಂಬಂಧಿಸಿದ ಎಲ್ಲಾ ಹಿತಾಸಕ್ತದಾರರ ಅವಗಾಹನೆಗಾಗಿ ವಿಶೇಷ ಭೂಸ್ವಾಧೀನಾಧಿಕಾಗಳು, ಹೇಮಾವತಿ ಜಲಾಶಯ ಯೋಜನೆ, ಹಾಸನ ಇವರ ಕಾರ್ಯಾಲಯದಲ್ಲಿ ಇಡಲಾಗಿದೆ.

ಜಿಲ್ಲೆ: ಹಾಸನ, ತಾಲ್ಲೂಕು: ಹೊಳೆನರಸೀಪುರ, ಹೋಬಳಿ: ಹಳೇಕೋಟೆ, ಗ್ರಾಮ: ಕಲ್ಲೇನಹಳ್ಳಿ

| ಕ್ರ.ಸಂ | ಖಾತೆದಾರರ ಹೆಸರು (ಜೆ.ಎಂ.ಸಿ. ಯನ್ವಯ) | | ಸರ್ವೆ ಖಾತಾ ನಂ. | ಸ್ವಾಧೀನಕ್ಕೆ ಒಳಪಡುವ ಒಟ್ಟು ವಿಸ್ತೀರ್ಣ (ಕಲಂ 11(1) ರನ್ವಯ) | | ತರಹೆ | ಸ್ವಾಧೀನ ಕೊಳ್ಳ ಪಡುವ ಒಟ್ಟು ವಿಸ್ತೀರ್ಣ | | ತರಹೆ | ಚಕ್ಕುಬಂದಿ/ ಸರಹದ್ದು | | | | ಮರ-ವಾಲ್ಕಿಗಳ ವಿವರ | | | | ಷರಾ |
|---|---|---|---|---|---|---|---|---|---|---|---|---|---|---|---|---|---|---|
| | ಭೂಮಾಲೀಕರ/ ಹಿಡುವಳಿದಾರರ ಹೆಸರು | ಅನುಭವದಾರರ ಹೆಸರು | | ಕೃಷಿ/ಕೃಷಿಯೇತರ | ಖರಾಬು | | ಕೃಷಿ/ ಕೃಷಿಯೇತರ | ಖರಾಬು | | ಪೂ | ಪ | ಉ | ದ | ಮರಗಳ ವಿಧ | ಮರಗಳ ಸಂಖ್ಯೆ | ಮಲ್ಕಿ ಕಟ್ಟೆ | ವಾಲ್ಕಿ/ ಕಟ್ಟಡಗಳ ಸಂಖ್ಯೆ/ ವಿಸ್ತೀರ್ಣ | |
| 1 | ನಂಜಮ್ಮ ಬಿನ್ ಲೇ॥ ರಾಮಯ್ಯ, ಸಣ್ಣಸ್ವಾಮಿ ಬಿನ್ ಲೇ॥ ರಾಮಯ್ಯ, ಪುಟ್ಟರಾಜು ಬಿನ್ ಲೇ॥ ರಾಮಯ್ಯ, ಕುಮಾರ ಬಿನ್ ಲೇ॥ ರಾಮಯ್ಯ, ಪುಟ್ಟರಾಜು ಟಿ.ಪಿ ಬಿನ್ ಲೇ॥ ರಾಮಯ್ಯ, | ನಂಜಮ್ಮ ಬಿನ್ ಲೇ॥ ರಾಮಯ್ಯ, ಸಣ್ಣಸ್ವಾಮಿ ಬಿನ್ ಲೇ॥ ರಾಮಯ್ಯ, ಪುಟ್ಟರಾಜು ಬಿನ್ ಲೇ॥ ರಾಮಯ್ಯ, ಕುಮಾರ ಬಿನ್ ಲೇ॥ ರಾಮಯ್ಯ, ಪುಟ್ಟರಾಜು ಟಿ.ಪಿ ಬಿನ್ ಲೇ॥ ರಾಮಯ್ಯ, | 10/1 | 0-09 | - | ಖುಷ್ಕಿ | 0-09 | - | ಖುಷ್ಕಿ | ಸ.ನಂ 9 | ಸ.ನಂ 11 | ಉಳಿಕೆ | ಸ.ನಂ 10/3 | - | - | - | - | - |
| 2 | ಕಾಳಶೆಟ್ಟಿ ಬಿನ್ ಹೊನ್ನಶೆಟ್ಟಿ | ಕಾಳಶೆಟ್ಟಿ ಬಿನ್ ಹೊನ್ನಶೆಟ್ಟಿ | 10/3 | 0-21 | - | ಖುಷ್ಕಿ | 0-21 | - | ಖುಷ್ಕಿ | ಸ.ನಂ 9 | ಸ.ನಂ 11 | ಸ.ನಂ 10/1 | ಉಳಿಕೆ | ತೆಂಗಿನ ಸಸಿ ತೇಗ | 5 2 | - | - | - |
| 3 | ದ್ಯಾವಮ್ಮ ಕೋಂ ಅಮಾಸಯ್ಯ, | ದ್ಯಾವಮ್ಮ ಕೋಂ ಅಮಾಸಯ್ಯ, | 11 ಬ್ಲಾಕ್ II | 0-03 | - | ಖುಷ್ಕಿ | 0-03 | - | ಖುಷ್ಕಿ | ಸ.ನಂ 10 | ಉಳಿಕೆ | ಪಿಳ್ಳೇನಹಳ್ಳಿ ಗಡಿ | ಉಳಿಕೆ | - | - | - | - | - |
| 4 | ರಂಗೇಗೌಡ ಬಿನ್ ಕುಳ್ಳೇಗೌಡ, | ರಂಗೇಗೌಡ ಬಿನ್ ಕುಳ್ಳೇಗೌಡ, | 11 ಬ್ಲಾಕ್ III | 0-11 | - | ಖುಷ್ಕಿ | 0-11 | - | ಖುಷ್ಕಿ | ಸ.ನಂ 10 | ಉಳಿಕೆ | ಪಿಳ್ಳೇನಹಳ್ಳಿ ಗಡಿ | ಉಳಿಕೆ | ತೆಂಗು | 15 | - | - | - |
| | ಒಟ್ಟು | | | 1-04 | | | 1-04 | | | | | | | | | | | |

ಘೋಷ್ವಾರೆ

| ಕ್ರ.ಸಂ | ಗ್ರಾಮ | ಕುಳಗಳು | ಕಲಂ 11(1) ರಂತೆ ವಿಸ್ತೀರ್ಣ | ಜೆ.ಎಂ.ಸಿ ವರದಿಯಂತೆ ವಿಸ್ತೀರ್ಣ | ಕಲಂ 19(1) ರಂತೆ ವಿಸ್ತೀರ್ಣ | ಷರಾ |
|---|---|---|---|---|---|---|
| 1 | ಕಲ್ಲೇನಹಳ್ಳಿ | 4 | 1-04 | 1-04 | 1-04 | ಕಲ್ಲೇನಹಳ್ಳಿ ಗ್ರಾಮದ ಒಟ್ಟು ವಿಸ್ತೀರ್ಣ ಕಲಂ 11(1) ರಂತೆ 1-04 ಎಕರೆ-ಗುಂಟೆ ಆಗಿದ್ದು ಜೆ.ಎಂ.ಸಿ ವರದಿಯಂತೆ 1-04 ಎಕರೆ-ಗುಂಟೆ, ಕಲಂ 19(1) ತಃಖ್ತೆ ತಯಾರಿಸಲಾಗಿದೆ. |
| | ಒಟ್ಟು | 4 | 1-04 | 1-04 | 1-04 | |

ವಾಸಾಸಂಇ/ಹಿಸನಿ/ಹಾಸನ/967/ಕೆಎಸ್‌ಎಂಸಿಎ/2024-25

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ (ರೇಣುಕಾ ಬಿ.)
ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಭೂಸ್ವಾಧೀನ-1&3)

Editor,Printer , Publisher, &owned By : Gopal, door no-LIG-337, K.H,B Colony, new Bus Stand Opposite, Hassan-573201, karnataka
Printed at : HONALU GRAPHICS, Ashoka Road, M.G.Road, Vidya Nagara, Hassan-573202, Karnataka. Editor Gopal, Mob: 9886368975, 9900663844,